ಬೆಳಗಾಂನಲ್ಲಿ ರಾಯಭಾಗ್, ಚಿತ್ರದುರ್ಗದಲ್ಲಿ ಮೊಳಕಾಲ್ಮೂರು ಕಪ್ಪು ಭಾಗ ಎಂದು ಪರಿಗಣಿಸಲಾಗಿದೆ. ಎಲ್ಲಾ ಕಡೆ ಮೈಕ್ರೋ ಲೆವೆಲ್ ಸರ್ವೇ ಇನ್ನೂ ಸಂಪೂರ್ಣವಾಗಿ ಆಗಿಲ್ಲ. ಬಹುಶಃ ಕೋಲಾರ ಜಿಲ್ಲೆಯಲ್ಲಿ ಮಾಡಿದ್ದೇವೆ ಇನ್ನೂ ಸಂಪೂರ್ಣವಾದ ವರದಿಯನ್ನು ಸಲ್ಲಿಸಬೇಕಾಗಿದೆ ಆಪರದಿ ಬಂದ ನಂತರ ಕಪ್ಪು ಎಂದು ಏನು ಇದೆ ಅದನ್ನು ಆ ತಾಲ್ಲೂಕಿನಲ್ಲಿ ತೆಗೆದುಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ೯ ತಾಲ್ಲೂಕುಗಳಲ್ಲಿ ಸ್ಥಿತಿವಂತರು ಬೋರ್ವೆಲ್‌ಗಳನ್ನು ತೆಗೆಸಿ ತಮಗೆ ಬೇಕಾದ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ ಆದರೆ ಸ್ಥಿತಿಗತಿ ಚೆನ್ನಾಗಿ ಇಲ್ಲದೇ ಇರುವವರು ಸಾಲಕ್ಕೆ ಪಿ.ಎಲ್.ಡಿ. ಬ್ಯಾಂಕ್‌ಗೆ ಅಥವಾ ಇನ್ನಿತರ ಪೆಡ್ಯೂಲ್ಡ್ ಬ್ಯಾಂಕ್‌ಗಳಿಗೆ ಅರ್ಜಿ ಹಾಕಿದಾಗ ಈ ಕಪ್ಪು ಮತ್ತು ಬಿಳುದು ಪ್ರದೇಶ ಎನ್ನುವುದು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಕೋಲಾರದಲ್ಲಿ ೭ ತಾಲ್ಲೂಕುಗಳನ್ನು ಗ್ರೇ ಏರಿಯಾ ಎಂದು ಮಾಡಿ ಸಾಲದ ಅನುಕೂಲತೆಗಳನ್ನು ನಿರಾಕರಿಸಿರುತ್ತಾರೆ. ಯು.ಆರ್. ರಾವ್ ಅವರು ಸ್ಯಾಟಲೈಟ್ ಸರ್ವೇ ಕಾರ್ಯಕ್ರಮ ಕೈಗೊಂಡಿದ್ದಾರೆಂದು ನನ್ನ ಒಂದು ಪ್ರಶ್ನೆಗೆ ಹೋದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡಿದ್ದರು. ಈ ಸರ್ವೆಯಲ್ಲಿ ವಿಲೇಜ್‌ನ್ನು ಒಂದು ಯೂನಿಟ್ ಆಗಿ ಇಟ್ಟುಕೊಂಡು ವ್ಯಾಲಿ ಸರ್ವೇ ಮಾಡಿದರೆ ಯಾವ ಸ್ಥಳದಲ್ಲಿ ನೀರಿನ ಅನುಕೂಲತೆ ಹೆಚ್ಚು ಇದೆ ಎಂಬುದನ್ನು ತಿಳಿಯುವುದಕ್ಕೆ ಅನುಕೂಲ ಆಗುತ್ತದೆಂದು ನನ್ನ ಅಭಿಪ್ರಾಯ ಈ ಬಗ್ಗೆ ಅವಕಾಶ ಮಾಡಿಕೊಡುತ್ತೀರಾ ? ಎರಡನೆಯದಾಗಿ ನೀರು ಎಲ್ಲಾ ಕಡೆ ಸಿಗುತ್ತಿದೆ ಇದರಿಂದ ಕೊಳವೆಬಾವಿಗಳನ್ನು ರೈತರು ಹಾಕಿ ಕೊಂಡಿದ್ದಾರೆ ಆದ್ದರಿಂದ ತಕ್ಷಣ ಕೆಲವು ವರ್ಷಗಳಲ್ಲಿ ಡಾರ್ಕ್ ಆಗುತ್ತಾ ಗ್ರೇ ಏರಿಯಾ ಎಂದು ಘೋಷಿಸಿರುವುದನ್ನು ತಪ್ಪಿಸಿಟ್ಟುವುದಕ್ಕೆ ದಯವಿಟ್ಟು ಸ್ಟೇ ಆರ್ಡರ್ ಕೊಟ್ಟು ಎಲ್ಲಾ ಕಡೆ ನೀರು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡಿ.

ಶ್ರೀ ಆರ್. ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ಹೇಳಿದ ತಕ್ಷಣ ಆ ಆರ್ಡರನ್ನು ಸಸ್ಪೆಂಡ್ ಮಾಡುವುದಕ್ಕಾಗುವುದಿಲ್ಲ. ಕಾನೂನಿನ ಚೌಕಟ್ಟಿನೊಳಗಡೆ ಬರುವುದಾದರೆ ಪರಿಶೀಲನೆ ಮಾಡಿ ನೋಡುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕನ್ನು ಡಾರ್ಕ್ ಏರಿಯಾ ಎಂದು ಗುರುತು ಮಾಡಿದ್ದಾರೆ ಇದೊಂದು ಅಬಾರ್ಡ್‌ನವರು ಮಾಡತಕ್ಕ ವ್ಯವಸ್ಥೆ ಈ ಬಗ್ಗೆ ಸರ್ಕಾರ ಒಂದು ಯೋಚನೆಯನ್ನು ಮಾಡಿದೆ, ಅದು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದಿದೆ ಕಾನೂನಿನ ಚೌಕಟ್ಟಿನೊಳಗಡೆ ಈಗಿರತಕ್ಕ ನಿರ್ಬಂಧಗಳನ್ನು ತೆಗೆಯಲಿಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಕಳೆದ ಮೂರು ಪರ್ಷಗಳಿಂದ ಇದೇ ಉತ್ತರ ಬರುತ್ತಾ ಬರುತ್ತಿದೆ ಬಡವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರೆ ಅಷ್ಟೆ ಸಾಕು.

ಶ್ರೀ ಆರ್.ಸಿ. ಜಿಗಜಿಣಗಿ.—ರೈತರ ಬಗ್ಗೆ ಮಾನ್ಯ ಸದಸ್ಯರಿಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂಥ ಹೆಚ್ಚಿನ ಕಳಕಳಿ ನನಗೆ ಇದೆ. ಆದ್ದರಿಂದ ಇವನ್ನು ಸಾಧ್ಯವಾದಷ್ಟು ನಿವಾರಣೆ ಮಾಡುತ್ತೇವೆ. ಆದರೆ ಯಾವ ದಿಪಸ, ಯಾವ ತಿಂಗಳು ಎಂದು ಹೇಳುವುದಕ್ಕಾಗುವುದಿಲ್ಲ ಅದನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ತಡೆಹಿಯಲಾದ ಪ್ರಶ್ನೆ ಸಂಖ್ಯೆ ೪೦೭ (೧೪೧೮)

ಅಧ್ಯಕ್ಷರು —ಮಾನ್ಯ ಕೆ. ಪ್ರತಾಪಚಂದ್ರಶೆಟ್ಟಿಯವರ ಪರವಾಗಿ ಮಾನ್ಯ ಶ್ರೀ ಇದಿನಬ್ಬರವರು ಪ್ರಶ್ನೆಯನ್ನು ಕೇಳಬಹುದು.

ಕೆ.ಎಫ್.ಡಿ.ಸಿ, ಕೆ.ಪಿ.ಸಿ. ಹಾಗೂ ಕೆ.ಸಿ.ಡಿ.ಸಿಯಲ್ಲಿ ತೊಡಗಿಸಿರುವ ಬಂಡವಾಳ

೧೪೧೮. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅರಣ್ಯ ಇಲಾಖೆಯಡಿಯಲ್ಲಿರುವ ಕರ್ನಾಟಕ ಅರಣ್ಯೋದ್ಯಮಿ ನಿಗಮ ಕರ್ನಾಟಕ ಪ್ಲಾಂಟೇಷನ್ ನಿಗಮ, ಕರ್ನಾಟಕ ಗೇರು ಅಭಿವೃದ್ಧಿ ನಿಗಮಗಳಲ್ಲಿ ಸರ್ಕಾರವು ಹೊಂದಿರುವ ಬಂಡವಾಳದ ಪ್ರಮಾಣವೆಷ್ಟು ಹಾಗೂ ಯಾವ ರೂಪದಲ್ಲಿ ಈ ಬಂಡವಾಳವನ್ನು ಹೂಡಲಾಗಿದೆ ?

ಆ) ಮೇಲ್ಕಂಡ ನಿಗಮಗಳು ಪ್ರಾರಂಭವಾದಾಗಿನಿಂದ ಅವುಗಳ ಲಾಭ ನಷ್ಟದ ಪ್ರತ್ಯೇಕ ವಿವರಗಳನ್ನು ವರ್ಷವಾರು ತಿಳಿಸುವುದೆ ?

ಇ) ರಾಜ್ಯದಲ್ಲಿ ನೀಲಗಿರಿ ಮರ ಬೆಳೆಸಲು ಸರ್ಕಾರವು ಎಷ್ಟು ರೈತರ್ಯಾ ಭೂವಿಯಂನ್ನು ಉಪಯೋಗಿಸಿದೆ ಹಾಗೂ ಇದರ ಜವಾಬ್ದಾರಿಯನ್ನು ಯಾವ ನಿಗಮಕ್ಕೆ ಪಹಿಸಲಾಗಿದೆ ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸರ್ಕಾರವು ಅರಣ್ಯ ಇಲಾಖೆಯಡಿ ಇರುವ ವಿವಿಧ ನಿಗಮಗಳಲ್ಲಿ ಹೂಡಿರುವ ಬಂಡವಾಳದ ಮೊತ್ತ ಹಾಗೂ ಅದರ ಸ್ವರೂಪ ಈ ಕೆಳಕಂಡಂತಿದೆ.

(೧) ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತ, ಬೆಂಗಳೂರು. ಪೇರು ಬಂಡವಾಳದ ರೂಪದಲ್ಲಿ ೬೭.೬೭ ಲಕ್ಷ ರೂ,

(೨) ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು.

ಅ)	ನಗದು ರೂಪದಲ್ಲಿ	೨೧೭.೬೫ ಲಕ್ಷ ರೂ.
ಆ)	ರಬ್ಬರ್ ತೋಟಗಳ ಮೌಲ್ಯ	೫೮೬.೧೩ ಲಕ್ಷ ರೂ.
ಇ)	ಜಮೀನಿನ ಮೇಲೆ ಕೊಡತಕ್ಕ ಬಾಡಿಗೆಯನ್ನು ಪೇರು ಬಂಡವಾಳವಾಗಿ ಪರಿವರ್ತಿಸಿದ್ದು.	೩೬.೫೪ ಲಕ್ಷ ರೂ.
	ಮೊತ್ತ	೮೪೦.೩೨ ಲಕ್ಷ ರೂ.

(೩) ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಮಂಗಳೂರು.

ಅ)	ಕೇಂದ್ರ ಸರ್ಕಾರದ ಬಂಡವಾಳ ನಗದು ರೂಪದಲ್ಲಿ ರೂ.	೪೪.೦೦ ಲಕ್ಷ ರೂ.
ಆ)	ರಾಜ್ಯ ಸರ್ಕಾರದ ಬಂಡವಾಳ ನಗದು ರೂಪದಲ್ಲಿ	೭೪.೦೦ ಲಕ್ಷ ರೂ.
ಇ)	೨೦೯೩ ಹೆಕ್ಟೇರ್ ಗೇರು ನೆಡುತೋಪುಗಳ ಮೌಲ್ಯ.	೮೦.೦೦ ಲಕ್ಷ ರೂ.
	ಮೊತ್ತ	೧೯೮.೦೦ ಲಕ್ಷ ರೂ.
	ಒಟ್ಟು	೧೦೩೮.೩೨ ಲಕ್ಷ ರೂ.

ಅ) ಮೇಲ್ಕಂಡ ನಿಗಮಗಳ ಲಾಭ ನಷ್ಟದ, ವಿವರಗಳು ಈ ಕೆಳಕಂಡಂತಿದೆ.

ನಿಗಮ. ಗಳು ಪ್ರಾರಂಭವಾದ ವರ್ಷ	ಕರ್ನಾಟಕ ಆರಣ್ಯಾಭಿವೃದ್ಧಿ ನಿಗಮ ಬೆಂಗಳೂರು.		ಕರ್ನಾಟಕ ರಾಜ್ಯ ಆರಣ್ಯ ಕೈಗಾರಿಕೆ ನಿಗಮ ಬೆಂಗಳೂರು.		ಕರ್ನಾಟಕ ಗೇರು ಅಭಿವೃದ್ಧಿ ನಿಗಮ, ಮಂಗಳೂರು.	
	ಲಾಭ ( )	ನಷ್ಟ (—) (ಲಕ್ಷ ರೂಪಾಯಿಂಗಳಲ್ಲಿ)	ಲಾಭ ( )	ನಷ್ಟ (—)	ಲಾಭ ( )	ನಷ್ಟ (—)
೧	೨	೩	೪	೫	೬	೭
೧೯೭೧–೭೨			...	...	...	...
೧೯೭೨–೭೩			...	...	...	...
೧೯೭೩–೭೪			೦.೦೪	...	...	...
೧೯೭೪–೭೫			...	೪.೫೪	...	...
೧೯೭೫–೭೬		೩೮.೪೭	೩.೭೪	...	...	...
೧೯೭೬–೭೭			...	೫.೧೦	...	...
೧೯೭೭–೭೮			೭.೫೯	...	...	...
೧೯೭೮–೭೯			...	೧.೯೭	...	೮.೯೬
೧೯೭೯–೮೦			...	೨೫.೪೪	೬.೭೫	...
೧೯೮೦–೮೧			...	೧೧೦.೧೦	೧.೧೬೮	...
೧೯೮೧–೮೨	೧೨.೧೦	...	...	೪೦.೬೩	...	೧೬.೬೧
೧೯೮೨–೮೩	೪.೩೩	...	೯.೩೦	...	...	೧೫.೬೪
೧೯೮೩–೮೪	೪೨.೮೧	...	೬೧.೧೦	...	...	೮.೪೬
೧೯೮೪–೮೫	೧೧.೮೫	...	೭೮ ೧೧	...	...	೪.೧೩
೧೯೮೫–೮೬	೨೧೫.೦೪	...	೪೯.೭೨	...	೧೯.೭೧	...
೧೯೮೬–೮೭	೨೬೪.೧೩	...	೪೬.೧೭	...	...	...

ಮೊತ್ತ	(+)	೬೨೦.೨೪	(—)	೩೮.೪೭	(+)	೨೫೫.೫೭	(—)	೧೪೭.೬೨	(+)	೧೨೭.೬೨೮	(—)	೫೧.೮೦

೫) ೩೫೩೩.೫೭ ಹೆಕ್ಟೇರ್ ರೆವಿನ್ಯೂ ಪ್ರದೇಶದಲ್ಲಿ ಈ ಕೆಳಕಂಡ ನಿಗಮಗಳು ನೀಲಗಿರಿ ಮರ ಗಳನ್ನು ಬೆಳೆಸಲು ಉಪಯೋಗಿಸಿ, ಜವಾಬ್ದಾರಿಯನ್ನು ವಹಿಸಿದೆ.

೧	ಮೈಸೂರು ಕಾಗದದ ಕಾರ್ಖಾನೆ ನಿಯಮಿತ.	೧೬೫೩.೦೦ ಹೆಕ್ಟೇರ್
೨	ಕರ್ನಾಟಕ ಪಲ್ಪ್‌ವುಡ್ ನಿಗಮ	೯೧೯.೦೭ ,,
೩	ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ.	೯೬೧.೫೦ ,,
		೩೫೩೩.೫೭ ಹೆಕ್ಟೇರ್

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ, ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಹೀಗೆ ನಾನಾ ನಿಗಮಗಳ ಆಗಮದಿಂದ ಏನು ಲಾಭವಿದೆ ? ಪ್ರತಿಯೊಂದು ನಿಗಮಗಳು ನಷ್ಟವಾಗಿರುವುದನ್ನು ಕಾಣುತ್ತಿದ್ದೇವೆ ಇದಕ್ಕೆ ಕಾರಣವೇನು ?

ಶ್ರೀ ಆರ್. ಸಿ. ಜಗಜಿಣಗಿ.—ಇದಕ್ಕೆ ನಿರ್ದಿಷ್ಟವಾದ ಕಾರಣ ಹೇಳುವುದು ಬಹಳ ಕಷ್ಟ. ಲಾಸ್ ಆಗುವುದಕ್ಕೆ ಕಾರಣವೇನು ಎನ್ನುವ ಮಾಹಿತಿ ನನ್ನ ಹತ್ತಿರವಿಲ್ಲ. ಮಾನ್ಯ ಸದಸ್ಯರಿಗೆ ವಿವರ ಗಳನ್ನು ಒದಗಿಸಿ ಕೊಡುತ್ತೇನೆ.

ದಿನದಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಾಳಿನದಿ ಹಾಗೂ ಬೇಡ್ತಿ ಜಲವಿದ್ಯುತ್ ಯೋಜನೆಯ ಬಗ್ಗೆ

೧೮೩೭. ಶ್ರೀ ಎನ್. ಎಂ. ಆಡ್ಯಂತಾಯ (ಸುರತ್ಕಲ್).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೮) ಕಾಳಿನದಿ ಜಲವಿದ್ಯುತ್ ಯೋಜನೆ ಸಮೂಹದಿಂದ ಉತ್ಪಾದಿಸಬಹುದಾದ ಜಲವಿದ್ಯುತ್‌ನ ಒಟ್ಟು ಅಂದಾಜು ಪ್ರಮಾಣವೆಷ್ಟು ? (ಪ್ರತಿ ಹಂತದ ಪ್ರತ್ಯೇಕ ವಿವರ ನೀಡುವುದು)

೯) ಈವರೆಗೆ ಈ ಯೋಜನೆ ಸಮೂಹಕ್ಕೆ ಖರ್ಚು ಮಾಡಿದ ಹಣವೆಷ್ಟು ?

೧೦) ಗಂಗವಳ್ಳಿ (ಬೇಡ್ತಿ) ಜಲವಿದ್ಯುತ್ ಯೋಜನೆಗಾಗಿ ಈವರೆಗೆ ಖರ್ಚು ಮಾಡಿದ ಹಣವೆಷ್ಟು ಮತ್ತು ಈ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

೧೧) ಗಂಗವಳ್ಳಿ ಯೋಜನೆಯಲ್ಲಿ ನಿರ್ಮಿಸಿದ "ಮಾಗಜಾಡ" ನಲ್ಲಿರುವ ಕೆ. ಪಿ. ಸಿ. ನಿವಾಸ ಗಳನ್ನು ಈಗ ಏತಕ್ಕಾಗಿ ಉಪಯೋಗಿಸಲಾಗುತ್ತಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

೮) ಮತ್ತು ೯) ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

೧೦) ಬೇಡ್ತಿ ಜಲವಿದ್ಯುತ್ ಯೋಜನೆಗಾಗಿ ಈವರೆಗೆ ೯.೦೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಯೋಜನೆಯ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

೧೧) ಕೆಲವು ನಿವಾಸಗಳನ್ನು ಅರಣ್ಯ ಕಾಲೇಜು ಪ್ರಾರಂಭಿಸಲು, ಕಷ್ಟಿ ವಿಶ್ವವಿದ್ಯಾನಿಲಯಕ್ಕೆ ಪೋಲೀಸ್ ತರಬೇತಿ ಶಾಲೆಗಾಗಿ ಪೊಲೀಸ್ ಇಲಾಖೆಗೆ ಕೊಟ್ಟಿರುತ್ತದೆ. ಕೆಲವು ಕಟ್ಟಡಗಳನ್ನು ವಿದ್ಯುತ್ ನಿಗಮದ ಉಸ್ತುವಾರಿ ಕೆಲಸಗಳಿಗಾಗಿ ಇಟ್ಟುಕೊಳ್ಳಲಾಗಿದೆ.